Representations by Members

SRI B.B. SAYANAK.—Sir, I had given notice under Rule 312 regarding Jains Medical College at Belgaum. The Hon. Minister for Health is here. In Belgaum B. Pharma classes are there and they are collecting Rs, 30,000 as capitation fees.

MR. SPEAKER.—I have not received the information. As soon as it is received I will post it in the Agenda.

SRI B. B. SAYANAK.—Sir, I am requesting to study this matter. They are collecting Rs. 30,000 for B. Pharma and Rs. 7,000 for D. Pharma as capitation fees. They have alotted 65 seats. I once again request the Health Minister and also the Chief Minister to immediately study the matter.

ಶ್ರೀಮತಿ ಎಸ್. ಪ್ರಮೀಳ.—ಮಾನ್ಯ ಅಧ್ಯಕ್ಷರೆ, ಮೈದಾ ಹಿಟ್ಟು ಹಾಗೂ ರವೆ ನಮ್ಮ ರಾಜ್ಯವನ್ನು ಬಿಟ್ಟು ಹೊರಗೆ ಹೋಗುತ್ತಿದೆ. ನಮ್ಮ ರಾಜ್ಯದ ಜನತೆಗೆ ಸಿಗುತ್ತಾ ಇಲ್ಲ. ಈ ಬಗ್ಗೆ ನಿಯಮ ೩೧೨ರ ಕೆಳಗೆಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಬರೆದುಕೊಂಡಿದ್ದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI A.K. ABDUL SAMAD.—We will just look into the matter.

Matter Under Rule 312

re.–Pressure on the Co-operative Societies to Purchase rejected goods lying in Binny Mills.

ಶ್ರೀ ಎಂ.ಸಿ ನಾನಯ್ಯ (ಮಡಿಕೇರಿ)—ಮಾನ್ಯ ಅಧ್ಯಕ್ಷರೆ, ನಾನು ಸಹಕಾರ ಸಂಘ ಸಂಸ್ಥೆಗಳಲ್ಲಿ ಅದರಲ್ಲಿಯೂ ನಮ್ಮ ಕರ್ನಾಟಕದಲ್ಲಿರತಕ್ಕ ಜನತಾ ಬಜಾರ್‌ಗಳಲ್ಲಿ ಮತ್ತು ಇತರ ಬಳಕೆದಾರರ ಸಂಘ ಸಂಸ್ಥೆಗಳಲ್ಲಿ ಬಟ್ಟೆಗಳನ್ನು ತೆಗೆದುಕೊಳ್ಳುತ್ತಾ ಇರುವ ಬಗ್ಗೆ ಸರ್ಕಾರದ ಒಂದು ನೀತಿ ಏನಿದೆ ಆ ನೀತಿಯ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಎತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಜನತಾ ಬಜಾರ್ ಮತ್ತು ಬಳಕೆದಾರರ ಸಂಘಗಳು ಹಾಗೂ ಮಾರ್ಕೆಟಿಂಗ್ ಸೊಸೈಟಿಗಳು ನಷ್ಟದಲ್ಲಿ ಏಕೆ ಕೆಲಸ ಮಾಡುತ್ತಿದೆ? ಸರ್ಕಾರ ಈ ಬಗ್ಗೆ ತನ್ನಗಮನವನ್ನು ಹರಿಸಿಲ್ಲವೆ? ಆದರಲ್ಲೂ ಬಳಕೆದಾರರ ಸಹಕಾರ ಸಂಘ ಮತ್ತು ಜನತಾಬಜಾರ್‌ಗಳಲ್ಲಿ ಇರತಕ್ಕ ಒಂದು ಕೊರತೆ ಏನೆಂದರೆ. Much of the loss is due to the dead stock of the textiles. ಇದರ ಜೊತೆಗೆ ಈಗ ಬಿನ್ನಿಮಿಲ್‌ನಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿಯ ಮೂಲಂ ಡೆಡ್ ಸ್ಟಾಕ್ ಇದೆ. ಮತ್ತು ಈ ಬಿನ್ನಿ ಮಿಲ್‌ನವರು ಇಟ್ಟುಕೊಂಡಿರುವ ಒಂದು ಪದ್ಧತಿ ಏನೆಂದರೆ, ಅವರು ತಯಾರಿಸತಕ್ಕ ಕೆಲವು ಬಟ್ಟೆಗಳು ಏನಿವೆ ಅವುಗಳನ್ನು ನ್ಯಾಷನಲ್ ಕೋ-ಆಪರೇಟಿವ್ ಫ್ಯಾಕ್ಟರ್ಸ್ ಮೂಲಕ ಅವರೇ ಇತರೇ ಹೋಲ್‌ಸೇಲ್ ಡೀಲರ್ಸ್‌ಗೆ, ಹೋಲ್‌ಸೇಲ್ ಸ್ಟೋರ್ಸ್‌ಗೆ ಸಪ್ಲೈ ಮಾಡುತ್ತಿದ್ದಾರೆ. ಇನ್ನು ಎರಡನೆಯದಾಗಿ, ಅವರು ಮ್ಯಾನುಫ್ಯಾಕ್ಚರ್ ಮಾಡುತ್ತಿರತಕ್ಕ ಇತರೇ ಬಟ್ಟೆಗಳು ಏನಿವೆ ಅವನ್ನು ಮನಾಪಲಿಸ್ಟಿಕ್ ಡೀಲರ್‌ಷಿಪ್ ಎನ್ನತಕ್ಕ ಆಧಾರದ ಮೇಲೆ ಕೆಲವೇ ಜನ ಡೀಲರ್ಸ್‌ಗಳು ಅವನ್ನು ಮನಾಪಲಿ ಮಾಡಿಕೊಂಡು ಬಿಟ್ಟಿದ್ದಾರೆ.

೨-೩೦ ಪಿ.ಎಂ.

ಕರ್ನಾಟಕದಲ್ಲಿ ಈ ರೀತಿಯಾಗಿ ನಡೆಯುತ್ತಿದೆ. ಈಗ ಏನಾಗಿದೆ ಎಂದರೆ, ಮನಾಪಲಿ ಡೀಲರ್ಸ್ ಮುಂಖಾಂತರ ಬಿನ್ನಿ ಮಿಲ್‌ನವರು ಬಟ್ಟೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಕರ್ನಾಟಕ ರಾಜ್ಯದಲ್ಲಿರ ತಕ್ಕಂಥ ಬಳಕೆದಾರರ ಸಹಕಾರಿ ಸಂಘಗಳು ಮತ್ತು ಸಹಕಾರಿ ಸಂಘಗಳ ಮೇಲೆ ನಮ್ಮ ಹಿರಿಯ ಅಧಿ

ಕಾರಿಗಳು ಬಾರಿ ಒತ್ತಡವನ್ನು ತಂದು ಪ್ರತಿಯೊಂದು ಸಂಸ್ಥೆಯೂ ೧೦-೧೫ ಸಾವಿರ ರೂಪಾಯಿಗಳಷ್ಟು ಬಟ್ಟೆಗಳನ್ನು ಮಾನಾಪಲಿ ಡೀಲರ್ಸ್ ಮುಖಾಂತರ ಕೆಗೆದುಕೊಳ್ಳಬೇಕು ಎನ್ನುವ ನೀತಿಯನ್ನು ವಿಧಿಸಲಾಗಿದೆ ಎಂದು ಆಪಾದನೆ ಮಾಡತಕ್ಕಂಥಾದ್ದು ಇದೆ. ಆದರೆ ಇವತ್ತು ಕರ್ನಾಟಕದಲ್ಲಿ ಆದರಲ್ಲೂ ಬೆಂಗಳೂರಿನಲ್ಲಿ ಈ ಒಂದು ಸುದ್ದಿ ಈಗಾಗಲೇ ಎಲ್ಲ ಕಡೆ ಹಬ್ಬಿದೆ. ೧೫ ಕೋಟಿ ರೂಪಾಯಿಗಳಷ್ಟು ಬಿನ್ನಿ ಮಿಲ್‌ನಲ್ಲಿರತಕ್ಕಂಥ ಡೆಡ್ ಸ್ಟಾಕ್, ರಿಜೆಕ್ಟೆಡ್ ಸ್ಟಾಕ್ ಬಟ್ಟೆಗಳನ್ನು ಕೋ-ಆಪರೇಟಿವ್ ಸಂಸ್ಥೆಗಳ ಮುಖಾಂತರ ಮಾರಾಟ ಮಾಡುವಂಥಾ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಈ ಹದಿಮೂರೂ ಕೋಟಿ ರೂಪಾಯಿಗಳಿಗೆ ಮೂರೂ ಕೋಟಿ ರೂಪಾಯಿಗಳಷ್ಟು ಕಮಿಷನ್ ರೂಪದಲ್ಲಿ ಕೊಡಲಿಕ್ಕೆ ಅವರು ತಯಾರಾಗಿದ್ದಾರೆ ಎನ್ನುವ ಮಾತು ಕೂಡ ಬೆಳಕಿಗೆ ಬರಬೇಕಾದರೆ ನಮ್ಮ ರಾಜ್ಯದಲ್ಲಿ ಇರತಕ್ಕಂಥ ಸಹಕಾರಿ ಸಂಘ ಸಂಸ್ಥೆಗಳು ಉಳಿಯುತ್ತವೆಯೆ? ಎಂದು ಕೇಳಬೇಕಾಗುತ್ತದೆ. ಇವುಗಳನ್ನು ಉತ್ತಮ ಸಂಸ್ಥೆಗಳನ್ನಾಗಿ ಮಾಡಬೇಕೆಂದು ಹೊರಟಿರುವಾಗ ಜನತಾ ಬಜಾರ್, ಒಳಕೆದಾರರ ಸಹಕಾರ ಸಂಘಗಳು ಈ ರೀತಿಯಾದಂತ ಡೆಡ್ ಸ್ಟಾಕ್ ಬಟ್ಟೆಗಳನ್ನು ಕೊಂಡುಕೊಳ್ಳುವುದಕ್ಕೆ ಪುರಸ್ಕಾರ ಕೊಡುತ್ತಿರುವುದರ ಬಗ್ಗೆ ದಯವಿಟ್ಟು ಮಾನ್ಯ ಮಂತ್ರಿಗಳು ತೀವ್ರವಾದ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯಾವ ಜನತಾ ಬಜಾರ್ ಲಕ್ಷಾಂತರ ರೂಪಾಯಿಗಳ ನಷ್ಟದಲ್ಲಿ ನಡೆಯುತ್ತಿದೆ. ಅಂಥ ಕಡೆ ಈ ಡೆಡ್ ಸ್ಟಾಕ್ ಬಟ್ಟೆಗಳನ್ನು ಕೊಂಡುಕೊಂಡು ಈಗಾಗಲೆ ಇರುವ ಲಕ್ಸಾನ್ ಜೊತೆಗೆ ಮತ್ತಷ್ಟು ಲುಕ್ಸಾನನ್ನು ಹೆಚ್ಚಿಸುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ನೀತಿ ಏನು ಎಂದು ಕೇಳುತ್ತೇನೆ ಇದರಲ್ಲಿ ಮಾನಾಪಲಿ ಡೀಲರ್ಸ್ ಯಾರು ಇದ್ದಾರೆ ಅವರಿಗೆ ಕೆಲವು ಐಟಮ್ಸ್ ಕೊಟ್ಟಿದ್ದಾರೆಯೆಂದು ನನ್ನ ಗಮನಕ್ಕೆ ಬಂದಿರುತ್ತದೆ. ಬೆಂಗಳೂರಿನಲ್ಲಿರತಕ್ಕಂಥವರಿಗೆ ಸ್ಪನ್ ಪೈಟ್ ಸಿಲ್ಕ್ ಕೊಟ್ಟಿರುತ್ತಾರೆ, ಆದರೆ ಜೊತೆಗೆ ಡೆಡ್ ಸ್ಟಾಕ್, ರಿಜೆಕ್ಟೆಡ್ ಸ್ಟಾಕ್ ಕೂಡ ಡೀಲರ್ಸ್‌ಗಳ ಮುಖಾಂತರ ಸಂಘಸಂಸ್ಥೆಗಳಿಗೆ ಹಂಚುವ ಏರ್ಪಾಡು ಮಾಡುತ್ತಿದ್ದಾರೆ. ಇದಕ್ಕೆಲ್ಲ ಅಧಿಕಾರಿಗಳೂ ಸಹ ಶಾಮಿಲಾಗಿದ್ದಾರೆ. ಇದಕ್ಕೆ ಪುರಸ್ಕಾರ ಯಾವ ರೀತಿ ದೊರೆಯಿತು? ರಾಜಕೀಯ ಹಸ್ತಕ್ಷೇಪ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಕೇಳುತ್ತಿದ್ದೇನೆ. ಮಾರ್ಕೆಟಿಂಗ್ ಸಹಕಾರ ಸಂಘ ಸಂಸ್ಥೆಗಳು ಹಾಗೂ ಬಳಕೆದಾರರ ಸಹಕಾರಸಂಘ ಸಂಸ್ಥೆಗಳ ಸದಸ್ಯರುಗಳು ಇದನ್ನು ಕೊಂಡುಕೊಳ್ಳುವುದು ಬೇಡವೆಂದು ಎಷ್ಟೇ ಪ್ರಯತ್ನಪಟ್ಟರೂ ಅದು ಸಾಧ್ಯವಾಗುತ್ತಿಲ್ಲ. ನಮ್ಮ ಸಹಕಾರಿ ಸಂಘ ಸಂಸ್ಥೆಗಳು ನಡೆಯುತ್ತಾ ಇರುವುದೆ ಕಷ್ಟದಿಂದಿರುವಾಗ ಯಾವರೀತಿ ಕೈವಾಡವೇ ಇರಲಿ, ಅದು ಎಷ್ಟು ಎತ್ತರದ ಕೈವಾಡವೇ ಇರಲಿ, ಅಧಿಕಾರಿಗಳ ಕೈವಾಡವೇ ಇರಲಿ ಮಾನ್ಯ ಮುಖ್ಯಮಂತ್ರಿಗಳು ಇದು ಏನು ವಿಚಾರ ಏನ್ನುವುದನ್ನು ಗಮನಿಸಬೇಕೆಂದು ಹೇಳುತ್ತೇನೆ. ಈ ರೀತಿ ಬಟ್ಟೆಗಳನ್ನು ಕೊಂಡುಕೊಳ್ಳಬೇಕೆಂದು ಒತ್ತಾಯ ತಂದ ಸಂದರ್ಭಗಳಲ್ಲಿಅದನ್ನು ವಿರೋದಿ ಮಾಡತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ಅದಕ್ಕೆ ಹಲವಾರು ಸಂದರ್ಭಗಳಲ್ಲಿ ಪೂರ್ಣ ಸಹಾಯ ಮಾಡತಕ್ಕಂಥ ಕಾಲದಲ್ಲಿ ಇಂಥಿಂಥ ಜಾಗದಲ್ಲಿ ಪರ್ಚೇಸ್ ಮಾಡಿ ಎಂದೂ ಹೇಳಿತಕ್ಕಂಥ ವಿಷಯಗಳೂ ಕೂಡ ಹೊರ ಬಂದಿರುತ್ತವೆ. ಈ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಾ, ಎಲ್ಲ ವಿಷಯಗಳನ್ನು ಇಲ್ಲಿ ಕೊಡದಿದ್ದರೂ ಕೂಡ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಬಗ್ಗೆ ಸರ್ಕಾರದ ನೀತಿ ಏನು ಎನ್ನುವುದನ್ನು ಮಾನ್ಯ ಮಂತ್ರಿಗಳೆಂದ ಆಯಸಿ ಬಾಕಿ ವಿಚಾರಗಳನ್ನು ಇಲ್ಲಿ ಕ್ಲಾರಿಫಿಕೇಷನ್ ಕೇಳುವಾಗ ಕೇಳುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).— ಮಾನ್ಯ ಅಧ್ಯಕ್ಷರೆ ನಾನು ಪ್ರವಾಸ ಹೋಗಿ ಬೆಳಿಗ್ಗೆ ಬಂದಿರುತ್ತೇನೆ. ಆ ಭಾಗಗಳಲ್ಲಿ ಕೆಲವೊಂದು ಮಾಹಿತಿಗಳನ್ನು ಪಡೆಯತಕ್ಕ ಪ್ರಯತ್ನ ಮಾಡಿದಾಗ ಮಾನ್ಯ ಮಂತ್ರಿಗಳ ಮೇಲೆ ಮತ್ತು ಮಾನ್ಯ ಪಶುಸಂಗೋಪನಾ ಮಂತ್ರಿಗಳ ಮೇಲೆ ಒಂದು ಗಂಭೀರವಾದ ಆಪಾದನೆ ನನ್ನ ಗಮನಕ್ಕೆ ಬಂದಿರುತ್ತದೆ. ಅದರ ವಿಪರ ಹೇಳುತ್ತೇನೆ. ಬಿನ್ನಿ ಮಿಲ್ ಸಹಕಾರ ಸಂಘಗಳ ಮುಖಾಂತರ ಬಟ್ಟೆ ಮಾರಾಟ ಮಾಡಿದ್ದಾರೆ. ನನ್ನ ಮತ ಕ್ಷೇತ್ರದಲ್ಲಿಯೇ ಕೆಲವೊಂದು ಸಂಘ ಸಂಸ್ಥೆಗಳ ಛೇರ್‌ಮನ್‌ರುಗಳನ್ನು ಕರೆದು ಕೇಳಿದಾಗ ಅದರ ಸೂಕ್ಷ್ಮ ಏನು ಎನ್ನುವುದನ್ನು ತಿಳಿಯಲಾಯಿತು. ಆದರ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ. ಕಳೆದ ಒಂದೆರಡು ತಿಂಗಳಲ್ಲಿ ರಾಜ್ಯದ ಬೇರೆ ಬೇರೆ ಸಹಕಾರಿ ಸಂಘಗಳು, ಜನತಾ ಬಜಾರು, ಇವುಗಳು ಬಟ್ಟೆಗಳನ್ನು ಖರೀದಿ ಮಾಡಿದ್ದಾರೆ. ಸರ್ಕಾರಕ್ಕೂ ಸಹಕಾರಿ ಸಂಘಗಳಿಗೂ ಯಾವ ವಿಧವಾದ ಸಂಬಂಧವಿಲ್ಲ. ಸಹಕಾರಿ ಸಂಘ ಸಂಸ್ಥೆಗಳು ಸ್ವತಂತ್ರವಾಗಿ ಕೆಲಸಮಾಡತಕ್ಕಂಥವುಗಳಾಗಿರುತ್ತವೆ. ಸರ್ಕಾರದವರು ಅವುಗಳ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿಲ್ಲವೆಂದು ಹೇಳಬಹುದು. ಆದರೆ ಈ ವಿಚಾರ

ಏನು ಇದೆ ಇದು ಎಷ್ಟರಮಟ್ಟಿಗೆ ನಡೆದಿದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಸಹಕಾರ ಮಂತ್ರಿಗಳಿಗೂ ಕೇಳಬಯಸುತ್ತೇನೆ. ನೀವು ಅಧಿಕಾರಿಗಳಿಗೆ ಇಂಥ ಬಟ್ಟೆಗಳನ್ನು ಖರೀದಿ ಮಾಡಲೇಬೇಕು ಎಂದು ಆದೇಶ ಕೊಟ್ಟಿದ್ದೀರಿ, ಅದು ತಮಗೂ ಗೊತ್ತಿರಬಹುದು. ಆದರೆ ತಾವು ಕೊಟ್ಟಿರತಕ್ಕಂಥ ಆದೇಶ ಮೌಖಿಕವಾಗಿಯೋ ಅಥವಾ ಲಿಖಿತ ಮೂಲಕವೋ ಎಂಬುದು ಗೊತ್ತಾಗಬೇಕು. ಅಲ್ಲಿನ ಅಧಿಕಾರಿಗಳು ಸ್ಪಷ್ಟವಾಗಿ ಹೇಳಿದ್ದಾರೆ ಮತ್ತು ತಮ್ಮ ಹೆಸರನ್ನೂ ಕೂಡ ಉಪಯೋಗಿಸಿದ್ದಾರೆ. ಸೊಸೈಟಿಗಳ ಛೇರ್‌ಮನ್‌ರನ್ನು ಕರೆಸಿ ಇಷ್ಟು ಬಟ್ಟೆಗಳನ್ನು ತಾವು ಖರೀದಿ ಮಾಡಬೇಕೆಂದು ಹೇಳಿ ಖರೀದಿ ಮಾಡಿಸಿದ್ದೀರಿ ಎಂದು ಹೇಳುತ್ತಾರೆ. ಹೀಗೆ ಖರೀದಿ ಮಾಡಿಸುವಾಗ ಅದು ಗ್ರಾಮಾಂತರ ಪ್ರದೇಶದ ಜನರಿಗೆ ಬೇಕೇ ಬೇಡವೇ, ಅದು ಸೊಸೈಟಿಗೆ ಅವಶ್ಯಕತೆ ಇದೆಯೇ ಇಲ್ಲವೇ, ಸೊಸೈಟಿಯಲ್ಲಿ ಹಣವಿದೆಯೇ ಇಲ್ಲವೇ ಎನ್ನುವುದನ್ನು ಯಾವುದೂ ನೋಡಲಿಲ್ಲ. ಇಷ್ಟು ಬೆಲೆ ಬಟ್ಟೆಯನ್ನು ತೆಗೆದುಕೊಳ್ಳಲೇಬೇಕೆಂದು ಒತ್ತಾಯ ಮಾಡಿದ್ದೀರಿ. ಇದನ್ನು ನಾನು ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳುತ್ತಾ ಇದ್ದೇನೆ. ಆ ಛೇರ್‌ಮೆನ್ ಸಾರ್ವಜನಿಕ ಜೀವನದಲ್ಲಿ ಇದ್ದಂಥವರು. ಸೆಕ್ರೆಟರಿಯೆವರು ತಮಗೆ ಮಂತ್ರಿಗಳು ಒತ್ತಾಯ ಮಾಡಿ ಖರೀದಿ ಮಾಡಿಸಿದ್ದಾರೆಂದು ಹೇಳುತ್ತಾರೆ. ಅವರು ಸ್ಪಷ್ಟವಾಗಿ ತಮ್ಮ ಹೆಸರು ಮತ್ತು ಮುಖ್ಯ ಮಂತ್ರಿಗಳ ಹೆಸರನ್ನೂ ಕೂಡ ಹೇಳಿದ್ದಾರೆ. ಇವತ್ತು ಮುಖ್ಯವಾದ ಪ್ರಶ್ನೆ ಏನೆಂದರೆ ಈ ಬಗ್ಗೆ ಸರ್ಕಾರ ನಮಗೆ ವಿವರ ಕೊಡಬೇಕು. ಎಷ್ಟು ಬಿನ್ನಿ ಮಿಲ್ ಬಟ್ಟೆಯನ್ನು ರಾಜ್ಯದ ಸಂಘ ಸಂಸ್ಥೆಗಳಿಗೆ ಜನತಾ ಬಜಾರಿಗೆ ಖರೀದಿ ಮಾಡಿಸಿದ್ದೀರಿ? ಇದರ ಹಿನ್ನೆಲೆ ಏನು? ಈ ರೀತಿ ಒತ್ತಡ ಮಾಡತಕ್ಕಂಥದ್ದರ ಉದ್ದೇಶ ಏನು ಎಂಬುದನ್ನು ಸ್ಪಷ್ಟವಾಗಿ ಉತ್ತರಿಸಬೇಕು. ಇತ್ತೀಚೆಗೆ ಸಹಕಾರಿ ಬ್ಯಾಂಕುಗಳ ಮುಖಾಂತರ ಸೊಸೈಟಿಗಳಿಗೆ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿರುತ್ತೀರಿ. ಆದರಂತೆ ಸರಳವಾದ ಬಡಿ ಯಲ್ಲಿ ಬ್ಯಾಂಕುಗಳ ಮುಖಾಂತರ ಕೊಟ್ಟು ಬಟ್ಟೆಯನ್ನು ಖರೀದಿ ಮಾಡಿಸಿದ್ದೀರಿ. ನಮ್ಮಲ್ಲಿ ಹಣವಿಲ್ಲವೆಂದು, ಹಣದ ಅಡಚಣೆ ಇದೆ ಎಂದು ಹೇಳುವಾಗ ಬಟ್ಟೆಯನ್ನು ಖರೀದಿ ಮಾಡುವುದಕ್ಕೆ ಹಣ ಕೊಡುತ್ತಿದ್ದೀರಿ. ಹಣದ ಕೊರತೆ ಇರತಕ್ಕಂಥ ಸಂಘ ಸಂಸ್ಥೆಗಳೂ ಕೂಡ ಬಟ್ಟೆಗಳನ್ನು ಕೊಳ್ಳಲು ಧೈರ್ಯ ಮಾಡಬೇಕಾದರೆ ಅದರ ಹಿನ್ನೆಲೆ ಏನು ಎನ್ನುವುದರ ಬಗ್ಗೆ ವಿವರಿಸಬೇಕು. ಆದರ ಹಿನ್ನೆಲೆ ಏನು ಎನ್ನುವ ವಿಚಾರ ಬಂದಾಗ ನನಗೂ ಸ್ವಲ್ಪ ಅನುಭವ ಇದೆ. ನಾನೂ ಕೂಡ ಸಹಕಾರಿ ಸಂಘದ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅಧಿಕಾರಿಗಳು ಯಾವ ರೀತಿ ಖಾಸಗೀ ಡೀಲರ್ಸ್‌ರೊಡನೆ ವರ್ತಿಸುತ್ತಾರೆ ಎನ್ನುವುದನ್ನು ನೋಡಿದ್ದೇನೆ. ಕನ್ಸ್ಯೂಮರ್ಸ್ ಕೋ ಆಪರೇಟಿವ್ ಸೊಸೈಟಿಯವರು ನ್ಯಾಷನಲ್ ಕನ್ಸ್ಯೂಮರ್ಸ್ ಕೋ ಆಪರೇಟೀವ್ ಫೆಡರೇಷನ್‌ಗಳ ಮುಖಾಂತರ ಬಟ್ಟೆಗಳನ್ನು ಯಾವ ರೀತಿ ಖರೀದಿ ಮಾಡಬೇಕೆಂಬ ನೀತಿ ಇರುತ್ತದೆ. ಅದನ್ನು ಮಾಡುವಾಗ ವ್ಯಾಪಾರಸ್ಥರು ಕಮಿಷನ್ ಕೊಟ್ಟು ವ್ಯವಹಾರ ಮಾಡುತ್ತಾರೆ, ಅಂಥ ವ್ಯವಹಾರ ಇದರಲ್ಲಿ ನಡೆದಿದೆ. ಅದೂ ದೊಡ್ಡ ಪ್ರಮಾಣದಲ್ಲಿ ನಡೆದಿದೆ, ಎನ್ನುವ ಆಪಾದನೆ ಇದೆ. It is a big scandal ಇದಕ್ಕೆ ಸಹಕಾರ ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಡಬೇಕು. ಏತಕ್ಕೆಂದರೆ ಈ ಒಂದು ವ್ಯವಹಾರದಲ್ಲಿ ತಮ್ಮ ಹೆಸರು ಸ್ಪಷ್ಟವಾಗಿ ಇದೆ. ಸಹಕಾರ ಮಂತ್ರಿಗಳು ಇದಕ್ಕೆ ಬೇಕಾದಂಥ ಎನ್‌ಕ್ವಯರಿ ನೇಮಿಸಿದರೆ ಸಾಕ್ಷಿಪುರಾವೆಗಳು ಬಂದೇ ಬರುತ್ತದೆ. ಸರಿಯಾದ ಎನ್‌ಕ್ವಯರಿ ನಡೆಸಿದರೆ ನಾನು ಪುರಾವೆ ಕೊಡಲಿಕ್ಕೆ ತಯಾರು ಇದ್ದೇನೆ. ದಯವಿಟ್ಟು ತಮ್ಮ ಇಲಾಖೆಯ ಪತಿಯಿಂದ ವಿಚಾರಣೆ ನಡೆಸುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಪಡಿಸುತ್ತೇನೆ.

SRI C. M. ARUMUGHAM (K. G. F.) Binny Mills is a Mill of repute; they produce cloth of sound and second; both are saleable in the market, but not the rejected goods. These rejected goods were lying in Binny Mills for several years and they are worth several crores of rupees. Some wholesale agents who had access to the Co-operative Societies had purchased these goods and sold them to the Co-operative Societies. I would like to know whether the Government had asked these societies, in order to help the wholesale dealers, to sell these goods to poor people. After all Binny goods are costly goods, whether it is cotton or silk. The poor villagers cannot buy these goods, let alone rejected goods, Because

they are all costly goods. These rejected goods were lying in the godowns of Binny Mills for several years. The Government agencies compelled the societies to sell these goods. Unnecessarily you are making an ordinary man to become a rich man. You are dumping these goods on the societies which are already running in loss. Government must come forward and say who is the person that purchased these goods and dumped them on the societies. He want to know whether the Government directed the Societies or the Registrar or Dy. Registrar directed the societies orally to take goods and sell them to the villagers. This is the point which I wanted to know from the Government.

SRI A. B. JAKANUR (Minister for Co-operation).— There are two matters one raised by Messrs. Nanaiah, Bommai and Chowdaiah and another by Sri C. M. Arumugham. I have to make two statements in this connection and I shall read them one by one.

It has not come to the notice of the Department of Co-operation the dead stook of cloth valued at several lakhs of rupees lying in Binny Mills being arranged to be sold to Co-operative Societies throughout the State and pressure has been brought upon these societies to purchase the dead stocks detrimental to the interests of the societies and the consumers at large. The Karnataka Co-operative Consumers Federation Limited is purchasing all textile requirements from the Binny Branch directly from the Mills through National Co-operative Consumers' Federation Ltd., Madras Branch. The Karnataka State Co-operative Marketing Federation is not making purchase of textiles. It is not known whether anyone is misusing names of high officers to push their sales. Whenever instances of private dealers canvassing to sell their textiles to Societies has come to the knowledge of the local officers, they have issued circular instructions to purchase quality goods after following the due procedure and also to ensure that their purchases are made through the Karnataka Co-operative Consumers Federation as far as possible.

The Karnataka Co-operative Consumers' Federation and the Central Co-operative Wholesale Stores will be advised to purchase only quality textiles after following the due procedure, which is aceeptable to the audit and advantages to the Society and Consumers.

The Co-operation Department is not aware of the subject at all.

The Karnataka Co-operative Consumers Federation Ltd., is purchasing all its textile requirements of Binny Brand directly from the Mills through the National Co-operative Consumers Federation Ltd., Madras Branch.

The Government of Karnataka or Department of Co-operation have not given any undertaking to purchase the rejected goods from Binny Mills and to distribute through Co-operative Societies.

The Karnataka Co-operative Consumers Federation and Central Co-operative Consumers Federation Stores will be advised to purchase only quality textiles after following the due procedure which is acceptable to the Audit and advantageous to the Society and Consumers.

ಮಾನ್ಯ ಸದಸ್ಯರುಗಳಾದ ಶ್ರೀಮಾನ್ ನಾನಯ್ಯನವರು ಹಾಗೂ ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾ, ಕೆಲವೊಂದು ಅಧಿಕಾರಿಗಳು, ಬಿನ್ನಿಮಿಲ್ ಡೀಲರ್ಸ್‌ನವರು ನನ್ನ ಮೇಲೆ ಆಪಾದನೆಯನ್ನು ಮಾಡಿದ್ದಾರೆ ಎಂದು ಹೇಳಿದರು. ಮಂತ್ರಿಗಳ ಹೆಸರನ್ನು ಹೇಳಿದ್ದಾರೆಂದು ಮಾನ್ಯ ಸದಸ್ಯರು ಏನು ಹೇಳಿದರು ಅದು ಸರಿಯಲ್ಲ ; ಅದು ಸುಳ್ಳು. ನಾನು ಸಹಕಾರ ಖಾತೆ ಸಚಿವನಾದ ಮೇಲೆ ಕರ್ನಾಟಕ ಕೋ ಆಪರೇಟೀವ್ ಕನ್ಸ್ಯೂಮರ್ಸ್ ಫೆಡರೇಷನ್, ನ್ಯಾಷನಲ್ ಕೋ ಆಪರೇಟೀವ್ ಕನ್ಸ್ಯೂಮರ್ಸ್ ಫೆಡರೇಷನ್ ಇವು ಮೇ ೧೯೮೦ ನಿಂದ ಸ್ಟೈಕ್‌ನಲ್ಲಿ ಹೋದವು. ಆಗ ಅವು ಬಂದ್ ಆದವು. ಕೆಲವೊಂದು ಕನ್ಸ್ಯೂಮರ್ಸ್ ಸೊಸೈಟೀಸ್ ಮತ್ತು ಕನ್ಸ್ಯೂಮರ್ಸ್ ಹೋಲ್‌ಸೇಲ್ ಸ್ಟೋರ್ಸ್ ಇವೆ. ಅವು ಇಂಥ ಕೆಲಸವನ್ನು ಮಾಡುತ್ತಿವೆ. ಆವರು ಪರ್ಚೇಸ್ ಮಾಡುವ ಸಲುವಾಗಿ ೩-೪ ಜನ ಸದಸ್ಯರಿರುವ ಕಮಿಟಿಯೊಂದನ್ನು ಮಾಡಿ ಬೊಂಬಾಯಿ, ಡೆಲ್ಲಿ, ಮದ್ರಾಸ್‌ಗಳಿಗೆ ಹೋಗಿ ಖರೀದಿ ಮಾಡೋಣವೆಂದು ಮಾಡುತ್ತಿದ್ದಾರೆ. ಅಲ್ಲಿ ಸಂಘದ ಇಬ್ಬರು ಸದಸ್ಯರು ಮತ್ತು ಕಾರ್ಯದರ್ಶಿಯವರು ಸೇರಿಕೊಂಡು ಬೊಂಬಾಯಿಯಲ್ಲಿ ಖರೀದಿ ಮಾಡಿದ್ದಾರೆ. ಇದನ್ನು ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಸಹಕಾರ ಸಂಘಗಳವರು ಬೇರೆ ಡೀಲರ್ಸ್‌ಗಳಿಂದ ತೆಗೆದುಕೊಳ್ಳಬೇಕಾಗಿಲ್ಲ ; ನ್ಯಾಷನಲ್ ಕೋ ಆಪರೇಟೀವ್ ಕನ್ಸ್ಯೂಮರ್ಸ್ ಸೊಸೈಟಿ ಕಡೆಯಿಂದ ತೆಗೆದುಕೊಳ್ಳಬೇಕೆಂದು ಹೇಳಿದೆ. ನಿಮ್ಮ ರಾಣಿಬೆನ್ನೂರು ತಾಲೂಕಿನಲ್ಲಿ ಒಬ್ಬ ಸೇಠ್‌ಜಿ ಅಂಗಡಿ ಇದೆ. ಅವರು ಅಲ್ಲಿ ಕೊಡುತ್ತಾರೆಂದು ಗೊತ್ತಾಯಿತು.

ಮತ್ತೊಂದು ಆಪಾದನೆಯನ್ನು ಮಾನ್ಯ ಸದಸ್ಯರು ಹೇಳಿದರು, ಅಲ್ಲಿ ಖರೀದಿ ಮಾಡಿದರೆ ಜಿಲ್ಲಾ ಬ್ಯಾಂಕ್‌ನವರು ಸಾಲ ಕೊಡುತ್ತಾರೆ ಎಂದು. ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಇನ್ನು ಮುಂದೆ ಸೇಠ್‌ಜೀ ಕಡೆಯಿಂದ ತರಬೇಡಿ, ಅವರಿಗೆ ಹೆಚ್ಚು ದುಡ್ಡು ಬೇಕಾದರೆ ಬ್ಯಾಂಕ್‌ನಿಂದ ಕೊಡಿಸೋಣ ಎಂದು ಹೇಳಿದ್ದೇನೆ. ಆದರೆ ಹೀಗೆ ಮಾಡಿ ಎಂದು ನಾನು ಅವರಿಗೆ ಹೇಳುವುದಕ್ಕೆ ಹೋಗಿಲ್ಲ. ನಾನು ಅರಿವೆ ವ್ಯಾಪಾರ ಮಾಡುವುದಕ್ಕೆ ಬಂದಿಲ್ಲ, ಅಥವಾ ಅಂಥಾ ಫ್ಯಾಮಿಲಿಯಿಂದಲೂ ಬಂದವನಲ್ಲ. ನಾನು ಅಗ್ರಿಕಲ್ಚರಿಸ್ಟ್ ಇದ್ದೇನೆ, ನನಗೆ ಎಷ್ಟು ಜನ ವಿರೋಧಿಗಳಿದ್ದಾರೋ ಅದೇ ರೀತಿ ನಿಮಗೂ ಅಷ್ಟೇ ಜನ ವಿರೋಧಿಗಳಿದ್ದಾರೆ, ನಿಮ್ಮ ಬಗ್ಗೆ ಕೂಡ ನನ್ನ ಹತ್ತಿರ ಅವರು ಬಂದು ಹೇಳಿದ್ದಾರೆ. ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಯಾರ ಮೇಲೆ ಆಗಲಿ ಆಪಾದನೆಗಳು ಬಂದಾಗ ತಕ್ಷಣ ಅವುಗಳನ್ನು ನಂಬುವುದಕ್ಕೆ ಹೋಗದೆ ಅದನ್ನು ಪರಿಶೀಲಿಸಿ ಸತ್ಯಾಂಶ ಏನೆಂಬುದನ್ನು ತಿಳಿದುಕೊಳ್ಳಬೇಕು.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಆರ್ಯಗೌಡರವರು ಮಾತನಾಡುತ್ತಾ ೧೩ ಕೋಟಿ ರೂಪಾಯಿ ಬೆಲೆ ಬಾಳುವ ಬಿನ್ನಿ ಮಿಲ್‌ನ ರಿಜೆಕ್ಟೆಡ್ ಗೂಡ್ಸ್‌ನ್ನು ಖರೀದಿ ಮಾಡಿದ್ದಾರೆಂದು ಹೇಳಿದರು, ಅವರು ಹೇಳಿದ್ದು ಸುಳ್ಳು ; ಅದು ಸರಿಯಲ್ಲ. ಇಲಾಖೆಯವರು ಗೌರ್ನಮೆಂಟಿನಿಂದ ಅಗ್ರಿಮೆಂಟ್ ಬಾಂಡ್ ಬರೆದುಕೊಟ್ಟಿದ್ದಾರೆಂದು ಹೇಳಿದರು. ಆದರೆ ನಮ್ಮ ಡಿಪಾರ್ಟ್‌ಮೆಂಟಿನವರು ಆ ರೀತಿ ಬರೆದು ಕೊಟ್ಟಿಲ್ಲ ; ಬರೆದು ಕೊಡುವುದಕ್ಕೆ ಬರುವುದೂ ಇಲ್ಲ. ರಿಜೆಕ್ಟೆಡ್ ಗೂಡ್ಸನ್ನು ತೆಗೆದುಕೊಂಡು ಮಾರುವುದಕ್ಕೂ ಬರುವುದಿಲ್ಲ. ಬಡಬಗ್ಗರಿಗೆ ರಿಜೆಕ್ಟೆಡ್ ಗೂಡ್ಸ್, ಸೆಕೆಂಡ್ಸ್ ಇದೆಲ್ಲಾ ಗೊತ್ತಾಗುವುದಿಲ್ಲ. ಅವರು ಜನತೆಗೆ ಮೋಸ ಮಾಡುತ್ತಾರೆ ; ಕೆಲವು ವಿಚಾರದಲ್ಲಿ ಅವರು ಬೊಂಬಾಯಿಗೆ ಹೋಗಿ ಖರೀದಿ ಮಾಡುವ ಪರಿಪಾಠ ಇದೆ. ಈ ಸಹಕಾರ ಸಂಘ, ಇದೊಂದು ಪ್ರೈವೇಟ್ ಇನ್‌ಸ್ಟಿಟ್ಯೂಷನ್, ಸರ್ಕಾರದವರು ಇದಕ್ಕೆ ಬಂದನ ಹಾಕಬಾರದೆಂದು ಕೆಲವರ ವಾದ. ಏಕೆಂದರೆ ಆವರು ಹೆಚ್ಚು ಚಾರ್ಜ್ ಮಾಡುತ್ತಾರೆ. ಅವರಿಗೆ ಟಿ. ಎ. ಡಿ. ಎ. ಹೆಚ್ಚು ಖರ್ಚಾಗುತ್ತದೆ. ಹೆಚ್ಚು ರಿಜೆಕ್ಟೆಡ್ ಗೂಡ್ಸನ್ನು

ಆವರು ಮಾರಾಟ ಮಾಡುತ್ತಾರೆಂದು ತಾವು ಹೇಳುವುದಾದರೆ ಅದನ್ನು ಪರಿಶೀಲಿಸಿ ಸರಿಪಡಿಸುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಇದುವರೆಗೂ ಅಂಥಾದ್ದು ಏನೂ ಆಗಿಲ್ಲ. ಆಲ್ಲದೆ ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಏನು ಆಶ್ವಾಸನೆ ಕೊಟ್ಟರು ಅದಕ್ಕೆ ಸ್ವಾಗತ ; ಆದರೆ ಅವರು ಒಂದು ವಿಚಾರ ಹೇಳಲಿಲ್ಲ. ಎಷ್ಟು ಸಮಯದಿಂದ ಈ ಸಹಕಾರಿ ಸಂಘಗಳಲ್ಲಿ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಗ್ರಾಪ್ರಾಂತರ ಪ್ರದೇಶದ ಸೊಸೈಟಿ ಇರಲಿ ಅಥವಾ ಪ್ರೈವೇಟ್ ಏಜೆನ್ಸಿಗಳಿಂದ ಎಷ್ಟು ಲಕ್ಷದ ಮಾಲು ಖರ್ಚಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಆದರೆ ಸೊಸೈಟಿ ಮುಂಖಾಂತರ ಇದೆಲ್ಲಾ ಆಗುತ್ತದೆ. ಆದ್ದರಿಂದ, ನಾನು ಕೇಳುವುದು ಏನು ಎಂದರೆ ಏಪ್ರಿಲ್ ಮತ್ತು ಮೇ ಈ ೨ ತಿಂಗಳಲ್ಲಿ ಎಷ್ಟು ರೂಪಾಯಿನ ಬಟ್ಟೆ ಖರೀದಿ ಮಾಡಿದ್ದಾರೆ? ನ್ಯಾಷನಲ್ ಫೆಡರೇಷನ್ ಮುಖಾಂತರ ಬಿಟ್ಟು ಉಳಿದ ಏಜೆನ್ಸಿಯಿಂದ ಎಷ್ಟು ಮೊತ್ತದ ಬಟ್ಟೆಯನ್ನು ಖರೀದಿ ಮಾಡಿದ್ದಾರೆ ? ಇದರಲ್ಲಿ ಸೆಕೆಂಡ್ ಕ್ವಾಲಿಟಿ ಎಷ್ಟು ಅಂದರೆ ರಿಜೆಕ್ಟ್ ಕ್ವಾಲಿಟಿ ಬಟ್ಟೆ ಇಲ್ಲವೆಂದು ಹೇಳಿದ್ದಾರೆ. ಮತ್ತೆ ನಿಮ್ಮ ಬಗ್ಗೆ ಜನ ಏನೂ ಏನೋ ಹೇಳುತ್ತಾರೆ ಅದನ್ನು ನಾನು ನಂಬುವುದಿಲ್ಲ ಎಂದು ಹೇಳಿದರು, ಆದರೆ ನಾನು ಬಹಳ ಕಾಲದಿಂದ ಈ ಸದನದಲ್ಲಿ ಫಿಕೆಲಸ ಮಾಡುತ್ತಿದ್ದೇನೆ. ನನ್ನ ಬಗ್ಗೆ ತಮಗೆ ಗೊತ್ತಿದೆ, ಅದರಲ್ಲೂ ನನ್ನ ಸಾರ್ವಜನಿಕ ಜೀವನ ತೆರೆದ ಪುಸ್ತಕ. ನಾನು ಹೇಳಿದ್ದು ನಿಮ್ಮ ಹೆಸರನ್ನು ಅಧಿಕಾರಿಗಳು ದುರುಪಯೋಗ ಮಾಡುತ್ತಿದ್ದಾರೆ ; ಅದರಲ್ಲೂ ನಮ್ಮ ಧಾರವಾಡ ಜಿಲ್ಲೆಯಲ್ಲಿ ತಾವು ಕ್ಯಾಂಪ್ ಮಾಡಿ ಮುಂದೆ ಹೋದಾಗ ಅಧಿಕಾರಿಗಳು ಸೊಸೈಟಿ ಮೂಲಕ ಎಷ್ಟು ಬಟ್ಟೆಯನ್ನು ಖರೀದಿ ಮಾಡಿದ್ದಾರೆಂಬುದನ್ನು ನೋಡಿ. ನಿಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ಗಳು ಇದರಲ್ಲಿ ಇದ್ದಾರೆ. ಆದಕ್ಕಾಗಿ ನಾನೂ ಒಬ್ಬ ಸದಸ್ಯನಾಗಿ ಈ ವಿಚಾರವನ್ನು ಇಲ್ಲಿ ಒತ್ತಿ ಹೇಳಿದಾಗ ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕಾಗುತ್ತದೆ. ಅಲ್ಲಿನ ಅಧಿಕಾರಿಗಳು ಮಂತ್ರಿಗಳ ಹೆಸರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದೇನೆ. ಆದ್ದರಿಂದ ಅಲ್ಲಿಷ್ಟೆಷ್ಟು ಬಟ್ಟೆಯನ್ನು ಖರೀದಿ ಮಾಡಿದ್ದಾರೆ ಎಂಬುದನ್ನು ದಯಮಾಡಿ ಹೇಳಬೇಕು. ಹೋಲ್‌ಸೇಲ್‌ನಲ್ಲಿ ಬಿನ್ನಿ ಬಟ್ಟೆ ಕೊಳ್ಳಲಿಕ್ಕಾಗಿ ಒಂದೊಂದು ಸೊಸೈಟಿಗಳಲ್ಲಿ ಸುಮಾರು ೨೦–೨೫ ಸಾವಿರ ರೂಪಾಯಿ ಮಾಲ್ ಪ್ರಾಕ್ಟೀಸ್ ನಡೆದಿದೆಯೆಂದು ಪ್ರಚಾರವಾಗಿದೆ. ಬಟ್ಟೆ ಕೊಳ್ಳಲು ಎಷ್ಟು ಒತ್ತಾಯ ಮಾಡಿ ಕಳುಹಿಸಿಕೊಟ್ಟಿದ್ದಾರೆ ಎನ್ನುವುದನ್ನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಇದರ ಬಗ್ಗೆ ತಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ನಾನು ಸಮಯ ಜಾಸ್ತಿ ತೆಗೆದುಕೊಳ್ಳಬೇಕೆನ್ನುವುದು ನನ್ನ ಇಚ್ಛೆಯಲ್ಲ, ಆದರೆ ಕೋಟ್ಯಾಂತರ ರೂಪಾಯಿ ಹಣ ದುರುಪಯೋಗವಾಗುತ್ತಿದೆ, ಅದಕ್ಕೆ ಮಾನ್ಯ ಮಂತ್ರಿಗಳು ಆಳವಾಗಿ ಆಲೋಚನೆ ಮಾಡಬೇಕೆಂದೂ ಏನೋ ಇದು ಒಂದು ಸಣ್ಣ ವಿಚಾರ ಎಂದು ತಿಳಿದುಕೊಳ್ಳಬಾರದೆಂದು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಇಂಥ ಅವ್ಯವಹಾರ ತುಂಬಾ ನಡೆಯುತ್ತಿದೆ. ಆದ್ದರಿಂದ ಸೊಸೈಟಿಗಳ ಮುಖಾಂತರ ಮತ್ತು ಜನತಾ ಬಜಾರ್ ಮುಂಖಾಂತರ ಎರಡು ತಿಂಗಳುಗಳಲ್ಲಿ ಎಷ್ಟು ಬಟ್ಟೆ ಖರೀದಿ ಮಾಡಿದ್ದಾರೆ ಮತ್ತು ಅದರ ಮೊತ್ತವೆಷ್ಟು ಹಾಗೂ ಯಾವ ಯಾವ ಬ್ಯಾಂಕುಗಳು ಇದಕ್ಕೆ ಅಡ್ವಾನ್ಸ್ ಆಗಿ ಸ್ಪೆಷಲ್ ಲೋನ್ಸ್ ಕೊಟ್ಟಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ತಾವು ಪ್ರವಾಸ ಹೋದಾಗ, ಆ ಮಾಲೀಕರು ಹೂಮಾಲೆ ಮತ್ತು ಕಾರುಗಳನ್ನು ತೆಗೆದುಕೊಂಡು ಬರುತ್ತಾರೆ. ಅಂಥವರ ಬಗ್ಗೆ ಸ್ವಲ್ಪ ಎಚ್ಚರಿಕೆ ವಹಿಸಬೇಕು ಎಂದು ಹೇಳಿ, ನಾನು ಏನು ವಿವರವನ್ನು ಕೇಳಿದ್ದೇನೆ ಅದಕ್ಕೆ ಒಂದು ವಾರದಲ್ಲಿ ಉತ್ತರ ತರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ಎಲ್ಲೆಲ್ಲಿ ರಿಜೆಕ್ಟ್ ಬಟ್ಟೆಗಳನ್ನು ಈಗಾಗಲೇ ಮಾರುತ್ತಿದ್ದಾರೆ ಎಂಬುದನ್ನು ತಾವು ನೋಟೀಸ್ ಕೊಟ್ಟನಂತರ ತಪಾಸಣೆ ಮಾಡಿಸಿದ್ದೇನೆ. ನಮ್ಮ ರಾಜ್ಯದಲ್ಲಿ ಸೆಕೆಂಡ್ ಕ್ವಾಲಿಟಿ ಬಟ್ಟೆಯನ್ನು ಸೊಸೈಟಿಯವರು ಕಳುಹಿಸಿದ್ದಾರೆ ಎನ್ನುವುದು ಸರಿಯಲ್ಲ. ಏಕೆಂದರೆ ಇಲ್ಲಿಯತನಕ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾವ ಯಾವ ಏಜೆನ್ಸಿಗಳಿಂದ ಎಷ್ಟೆಷ್ಟು ಬಟ್ಟೆಗಳನ್ನು ಖರೀದಿ ಮಾಡಲಾಗಿದೆ ಎಂಬ ಅಂಕಿ ಸಂಖ್ಯೆಗಳನ್ನು ಬೇಕಾದರೆ ತರಿಸಿಕೊಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ತಾವು ವಿಚಾರ ಮಾಡಿ ತಪ್ಪಿತಸ್ಥರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ.

SRI H. D. DEVEGOWDA.—The Hon. Minister has admitted in his own statement that some Officers have used his name. More than that, he has also agreed that some Bank is forcing the primary co-operatives to purchase cloth from a particular person. Otherwise it is not going to release the loan amount. Now, the Minister has to see whether his name has been deliberately misused by the Officers. If that has been done, action has to be taken against the concerned Officers.

ಶ್ರೀ ಜೆ. ಎಚ್. ಪಟೇಲ್.—ಜನ ಹೇಳುವುದು, ಏನು ಎಂದರೆ, ಇದಕ್ಕೆ ಕಾರಣ ತಮ್ಮ ಬ್ರದರ್-ಇನ್-ಲಾ ಅವರು ಬಿನ್ನಿ ಮಿಲ್ಲಿಗೆ ಹೋಲ್ ಸೇಲ್ ಏಜೆಂಟ್ ಆಗಿರುವುದು. ಇದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ವಿಚಾರಿಸಿದ್ದೀರಾ?

ಶ್ರೀ ಎ. ಬಿ. ಜಕನೂರ್.—ನನ್ನ ಬ್ರದರ್-ಇನ್-ಲಾ ಯಾರು? ನಾನು ರೈತ ಕುಟುಂಬದಿಂದ ಬಂದವನು.

ಶ್ರೀ ಅಜೀಜ್ ಸೇಠ್.- ತಮ್ಮ ಬ್ರದರ್-ಇನ್-ಲಾ ಯಾರೋ ಸೇಠ್ ಇದ್ದಾರೆಂದು ಹೇಳುತ್ತಿದ್ದಾರೆ. ನನ್ನ ಹೆಸರು ಸೇಟ್ ಎಂದು ಈ ಸಂದರ್ಭದಲ್ಲಿ ಎಲ್ಲರೂ ಕೇಳಬಹುದು, ಸೇಠ್‌ಜೀ ಅಂದರೆ ಯಾರು ಎಂದು?

ಶ್ರೀ ಎ. ಬಿ. ಜಕನೂರ್.—ನನ್ನ ಸಂಬಂಧಿ ಯಾರು ಇಲ್ಲ. ಆದರೆ ರಾಣಿ ಬೆನ್ನೂರ್‌ನಲ್ಲಿ ಯಾರೋ ಸೇಠ್ ಇದ್ದಾರೆಂದು ಹೇಳುತ್ತಾರೆ. ಅವರು ಯಾರು ಎಂದು ನನಗೆ ಗೊತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಇದರ ವಿಚಾರದಲ್ಲಿ ನಾನು ರುಜು ಮಾಡಿಲ್ಲ, ನನ್ನ ಗಮನಕ್ಕೆ ಬಂದಿರುವ ಹಾಗೆ, ಒಂದು ಜಿಲ್ಲಾ ಬ್ಯಾಂಕಿನವರು, ಈ ಬಟ್ಟೆಗಳನ್ನು ಕೊಂಡುಕೊಳ್ಳುವು ದಾದರೆ ನಾವು ಫೈನಾನ್ಸಿಯಲ್ ಅಸಿಸ್ಟೆನ್ಸ್ ಕೊಡುತ್ತೇವೆಂದು ಹೇಳಿದ್ದಾರೆಂದು ತಿಳಿದಿದ್ದೇನೆ. ಈ ಪ್ರಕರಣದ ಬಗ್ಗೆ ನಾನು ಆಳವಾಗಿ ಅಭ್ಯಾಸ ಮಾಡಿಲ್ಲ. ಇನ್ನು ಎರಡನೆಯದು ನನ್ನ ಹೆಸರನ್ನು ದುರುಪಯೋಗ ಮಾಡುತ್ತಿದ್ದಾರೆಂದು ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೀರಿ. ನಿಮ್ಮ ಸ್ಟೇಟ್‌ಮೆಂಟ್ ಓದಿ ನೋಡಿ ಗೊತ್ತಾಗುತ್ತದೆ.

ಶ್ರೀ ಎ. ಬಿ. ಜಕನೂರು.—ನನ್ನ ಗಮನಕ್ಕೆ ಬಂದಿರುವ ರೀತಿ, ರಾಣಿ ಬೆನ್ನೂರಿನಲ್ಲಿ ಈ ರೀತಿ ನಡೆಯುತ್ತಿದೆ ಮತ್ತು ಸಾಲ ಕೊಡುತ್ತೇವೆ ಎಂದು ಬ್ಯಾಂಕಿನವರು ಹೇಳುತ್ತಿದ್ದಾರೆ ಎಂದು ತಿಳಿದು ಬಂದಿದೆ. ಆದರೆ ವಿಚಾರ ಮಾಡಿದಾಗ ನಮ್ಮ ಅಧಿಕಾರಿಗಳು ಯಾರು ಆ ರೀತಿ ಫೋರ್ಸ್ ಮಾಡಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳು ನನ್ನ ಹೆಸರನ್ನು ದುರುಪಯೋಗ ಮಾಡಿದ್ದಾರೆಂದು ಹೇಳಿದ್ದೀರಿ.....

ಅಧ್ಯಕ್ಷರು.—ಅದನ್ನು ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ಬಿ. ಜಕನೂರು.—ಅದು ನನ್ನ ಗಮನಕ್ಕೆ ಬಂದಿಲ್ಲ; ಬಂದಿದ್ದರೆ ಸುಮ್ಮನೆ ಕೂಡಲಿಕ್ಕೆ ನಾನು ತಯಾರಿಲ್ಲ.

೩-೦೦ ಪಿ. ಎಂ.

ಶ್ರೀ ಅಜೀಜ್ ಸೇಟ್.—ಈಗತಾನೆ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಓದಿದರು. ಅದನ್ನು ಓದಿದ ಮೇಲೆ ಫರ್ದರ್ ಕ್ಲಾರಿಫಿಕೇಷನ್‌ಗೆ ಉತ್ತರ ಕೊಡುವಾಗ ಹೇಳಿದರು. ಶ್ರೀಮಾನ್ ಬೊಮ್ಮಾಯಿ ಅವರು ನನ್ನ ಮೇಲೆ ಆಪಾದನೆ ಮಾಡಿದ್ದಾರೆ. ಆದರೆ ಅದನ್ನು ನಾನು ಗಮನಕ್ಕೆ ತೆಗೆದು ಕೊಳ್ಳುವುದಿಲ್ಲ; ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಅದನ್ನು ನಾನು ವೆರಿಫೈ ಮಾಡಿಸುತ್ತೇನೆ.

ಶ್ರೀ ಎ. ಬಿ. ಜಕನೂರು.—ಈಗ ಮಾನ್ಯ ಸದಸ್ಯರು ಆಪಾದನೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ವೆರಿಫೈ ಮಾಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿ.ಸಿ.ಸಿ ಬ್ಯಾಂಕಿನವರು ಯಾರು ಯಾರು ಯಾವ ಯಾವಾಗ ಖರೀದಿ ಮಾಡಿದ್ದಾರೆ ಹಾಗೂ ಅದಕ್ಕೆ ಕಾರಣರಾಗಿರುವ ನಿಮ್ಮ ಅಧಿಕಾರಿಗಳ ಹೆಸರನ್ನು ಹೇಳಿದರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎ. ಬಿ. ಜಕನೂರ್.—ಅವರ ಹೆಸರನ್ನು ಹೇಳಿದರೆ ಅವರ ಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಈಗ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮತ್ತೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಏನು ಹೇಳಿದ್ದಾರೆ ಅದನ್ನು ಈಗ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವಾಗ ಹೇಳಿ. I have already told the concerned Secretary and he will get the information within one or two hours. There is no worry about it.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಈಗ ಮಾಡಿದ ಸ್ಟೇಟ್‌ಮೆಂಟ್ ಓದಿದರೆ ಅರ್ಥವಾಗುತ್ತದೆ. ಈಗ ಮಾನ್ಯ ಮಂತ್ರಿಗಳು ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ಆ ರೀತಿ ಎನ್‌ಕ್ವೈರಿ ಮಾಡಿಸುವುದಾದರೆ ಯಾರು ಯಾರು ಆಫೀಸರುಗಳು ಮಂತ್ರಿಗಳ ಹೆಸರನ್ನು ದುರುಪಯೋಗ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ತಾವು ಎಷ್ಟೇ ಸ್ಪೀಡಾಗಿ ಎನ್‌ಕ್ವೈರಿ ಮಾಡಿಸಿದರೂ ಕೂಡ ಧಾರವಾಡದಲ್ಲಿ ಯಾರು ಮಾಡಿದ್ದಾರೆ, ಹುಬ್ಬಳ್ಳಿಯಲ್ಲಿ ಯಾರು ಮಾಡಿದ್ದಾರೆ ಎಂಬುದನ್ನು ಕೂಡಲೇ ಎನ್‌ಕ್ವೈರಿ ಮಾಡಿಸುವುದು ಕಷ್ಟ. ಅದನ್ನು ನಿಧಾನವಾಗಿ ಮಾಡಿಸಿ. ಅವರು ಯಾರು ಯಾರು ಎಂಬುದನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಿದೆಯೇ?

ಶ್ರೀ ಆರ್. ಗುಂಡೂರಾವ್.—ಎನ್‌ಕ್ವೈರಿ ಈಗಾಗಲೇ ನಡೆದಿದೆ ಎಂದು ಹೇಳಿದ್ದಾರೆ. Perhaps my honourable friend did not understand. Iam always ready for an enquiry to ascertain whether it is true or not.

ಶ್ರೀ ಎಸ್. ಆರ್. ಬೊಮ್ಮಾಯಿ.—ಧಾರವಾಡದ ಒಂದು ಡಿಸ್ಟ್ರಿಕ್ಟ್ bank has purchased cloth worth Rs. 11 lakhs.

SRI A. B. JAKANUR.—I will get the information.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್ ಅವರ ೩೧ನೇ ನಿಯಮದ ಪ್ರಕಾರ ಇರುವ ಚರ್ಚೆಯನ್ನು ತೆಗೆದುಕೊಳ್ಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಇದನ್ನು ಇವೊತ್ತು ತೆಗೆದುಕೊಳ್ಳುವುದು ಬೇಡ. ನಾಡಿದ್ದು ತೆಗೆದುಕೊಳ್ಳೋಣ.

ಅಧ್ಯಕ್ಷರು.—ಆಗಬಹುದು. ಹಾಗಾದರೆ ಇವೊತ್ತಿನ ಡಿಮ್ಯಾಂಡ್‌ಗಳನ್ನು ಚರ್ಚೆಗೆ ತೆಗೆದು ಕೊಳ್ಳೋಣ.

ಶ್ರೀ ಎ. ಬಿ. ಜಕನೂರು.—ನನ್ನ ಖಾತೆಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳು ಏನಿವೆ ಅದರ ಜೊತೆಗೆ ಕೆಲವನ್ನು ಸೇರಿಸಬೇಕಾಗಿದೆ ಅದನ್ನು ಆಮೇಲೆ ಸೇರಿಸೋಣ.